ಓ.ಎಸ್.ನಂ.**09/2011**

ಡಿಡಬ್ಲ್ಯೂ .**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **09.06.2025.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದು ವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎನ್.ಎಲ್. ವಕೀಲರಿಂದ**

ಸಾಕ್ಷಿಗೆ ಒಂದು ವಂಶವೃಕ್ಷವನ್ನು ತೋರಿಸಿ ಅದು ಆಂಜಿನಪ್ಪನವರ ವಂಶವೃಕ್ಷ ಎಂದು ಹೇಳಿದಾಗ ಸಾಕ್ಷಿಯು ಗೊತ್ತಿಲ್ಲ ಎಂದು ಹೇಳಿ ನಂತರ ಅದು ಅಲ್ಲ ಎಂದು ಉತ್ತರಿಸುತ್ತಾರೆ. ಓ.ಎಸ್.**368/2006** ರಲ್ಲಿ ರಾಮಕ್ಕನವರು ನನ್ನ ಮತ್ತು ಆಂಜಿನಪ್ಪನವರ ವಿರುದ್ದ ದಾವೆ ಹಾಕಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಹಾಜರಾಗಿದ್ದೇನೆ ಎಂದರೆ ಸರಿ. ಯಾವ ವಿಚಾರಕ್ಕಾಗಿ ಸದರಿ ದಾವೆ ಹಾಕಲಾಗಿತ್ತು ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ರಾಮಕ್ಕನವರು ಸದರಿ ವಂಶವೃಕ್ಷವನ್ನು ಹಾಜರುಪಡಿಸಿದ್ದು ಆಗ ನನಗೆ ಅದರ ಬಗ್ಗೆ ಮಾಹಿತಿ ಸಿಕ್ಕಿರುತ್ತದೆ ಎಂದರೆ ಸರಿ ಅಲ್ಲ. ಸದರಿ ದಾವೆಯನ್ನು ರಾಮಕ್ಕನವರು ಆಂಜಿನಪ್ಪನವರ ವಿರುದ್ದ ಜೀವನಾಂಶ ಕೋರಿದ್ದರು ಎಂದರೆ ಗೊತ್ತಿಲ್ಲ.

ನನಗೆ ಕನ್ನಡ ಓದಲು ಬರುತ್ತದೆ. ನನಗೆ ಆಂಜಿನಪ್ಪ ಮತ್ತು ಸರೋಜಮ್ಮ ಕ್ರಯ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಇನ್ನೊಂದು ವಂಶವೃಕ್ಷವನ್ನು ತೋರಿಸಿದಾಗ ಅದನ್ನು ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದ ನಿಪಿ.**4** ಪಹಣಿಯು ಆಂಜಿನಪ್ಪನವರ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಪಹಣಿಯು **2010-11** ಸಾಲಿನ ಪಹಣಿ ಎಂದರೆ ಸರಿ. ನನ್ನ ಹೆಸರಿಗೆ ಆಗಿರುವ ಕ್ರಯ ಪತ್ರವು **2006** ನೇ ಸಾಲಿನದ್ದು ಎಂದರೆ ಸರಿ. ಕ್ರಯ ಪತ್ರವಾದ ಕೆಲವು ವರ್ಷಗಳ ನಂತರ **2012** ರಲ್ಲಿ ಪಹಣಿಯು ನನ್ನ ಹೆಸರಿಗೆ ಬಂದಿರುತ್ತದೆ. ಸಾಕ್ಷಿಗೆ ಪೋಟೋವನ್ನು ತೋರಿಸಿ ಅದರ ಯಾವ ದಿಕ್ಕಿಗೆ ಗಂಗಪ್ಪನವರ ಜಮೀನು ಬರುತ್ತದೆ ಎಂದರೆ ಸಾಕ್ಷಿಯು ಪೋಟೋ ನೋಡಿ ಉತ್ತರಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ. ನಿಪಿ.**13** ಮತ್ತ **14** ರಲ್ಲಿರುವ ಪೋಟೋವನ್ನು ವಾದಿಯದ್ದು ಎಂದು ಹೇಳುತ್ತಾರೆ. ಅದೇ ರೀತಿ ನಿಪಿ.**15** ರಿಂದ **23** ರಲ್ಲಿ ವಾದಿಯ ಪೋಟೋ ಇದೆ ಎಂದರೆ ಇರಬಹುದು. ಸದರಿ ಪೋಟೋದಲ್ಲಿ ರಾಗಿ ಬೆಳೆ, ಜೋಳದ ಬೆಳೆ ಮತ್ತು ರಾಗಿ ಬಣವೆ ಇದೆ ಎಂದರೆ ಸರಿ. ಪ್ರತಿ ವರ್ಷ ದಾವಾ ಆಸ್ತಿಯಲ್ಲಿ ಶಾಂತಮ್ಮನವರು ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿ ಅಲ್ಲ. ನಾನು ದಾವಾ ಆಸ್ತಿಯಲ್ಲಿ ಬೆಳೆ ಇಟ್ಟ ಬಗ್ಗೆ ಪೋಟೋವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅದೇ ರೀತಿ ನಾವು

ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದೇವೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಸರಿ ಆದರೆ ಪಹಣಿ ಮತ್ತು ಮ್ಯುಟೇಷನ್ ಹಾಜರುಪಡಿಸಿಲ್ಲ. ನಿಡಿ.3 ಪಹಣಿಯಲ್ಲಿ ನಾನು 19 ಗುಂಟೆಯಲ್ಲಿ ಸ್ವಾ ಧೀನದಲ್ಲಿದ್ದೇನೆ ಎಂದು ನಿಕರವಾಗಿ ನಮೂದಾಗಿಲ್ಲ ಎಂದರೆ ಸರಿ. ಸದರಿ ಪಹಣಿಯು 2012-13ನೇ ಸಾಲಿನ ಪಹಣಿಯಾಗಿರುತ್ತದೆ. ಸದರಿ ಪಹಣಿಯಲ್ಲಿ ಯಾವ ವರ್ಷದ ಪಹಣಿ ಎಂದು ನಮೂದಾಗಿಲ್ಲ ಎಂದರೆ ಸರಿ. ಸಾಕ್ಷಿಯು ಮುದ್ರಿತ ದಿನಾಂಕವನ್ನು ನೋಡಿ ದಿನಾಂಕ ನಮೂದಾಗಿದೆ ಎಂದು ಹೇಳುತ್ತಾರೆ.

**ಮುಂದುವರೆದ ಪಾಟೀ ಸವಾಲುಃ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.